**ದಿಃ06.03.2025 ರ ಆದೇಶದ ಪ್ರಕಾರ ಸಾಕ್ಷಿಯನ್ನು ಮುಂದುವರಿದ ಪಾಟೀ ಸವಾಲಿಗಾಗಿ ಪುನಃ ಕರೆಸಲಾಯಿತು.** ಸಾಕ್ಷಿಗೆ ದಿಃ**09.04.2025** ರಂದು ಪ್ರಮಾಣ ವಚನ ಭೋದಿಸಲಾಯಿತು

**ಪಾಟೀ ಸವಾಲುಃ 1, 2, 3 ಮತ್ತು 5 ನೇ ಆರೋಪಿತರ ಪರ**

**ಶ್ರೀಮತಿ ಎಸ್ ಪಿ ವಕೀಲರಿಂದಃ**

3. ಚಾಸಾ-1 ನನಗೆ ಸುಮಾರು ಹತ್ತು ವರ್ಷಗಳಿಂದ ಪರಿಚಯ. ಚಾಸಾ-3 ರಿಂದ 7 ನನಗೆ ಪರಿಚಯಸ್ಥರು. ನನಗೆ ಎಲ್ಲಿ ಕೂಲಿ ಕೆಲಸ ಸಿಗುತ್ತದೆಯೋ ಅಲ್ಲಿ ನಾನು ಕೆಲಸಕ್ಕೆ ಹೋಗುತ್ತೇನೆ. ಚಾಸಾ-1 ಇವರು ಗೃಹಲಕ್ಷ್ಮಿ ಗೃಹ ನಿರ್ಮಾಣ ಸೊಸೈಟಿಯಲ್ಲಿ ಸೆಕ್ಯೂರಿಟಿ ಕೆಲಸ ಮಾಡುತ್ತಾರೆ. ದಿಃ24.07.2016 ರಂದು ಚಾಸಾ-1 ಇವರು ಹಗಲು ಪಾಳಿಯಲ್ಲಿ ಕೆಲಸ ಮಾಡುತ್ತಿದ್ದರು. ನನ್ನನ್ನು ಆ ದಿನ ಚಾಸಾ-1 ಇವರು ಕರೆದುಕೊಂಡು ಹೋಗುವಾಗ ಬೆಳಗ್ಗೆ ಸುಮಾರು 10.30 ಆಗಿತ್ತು. ಅದ್ದೆ ವಿಶ್ವನಾಥಪುರದಿಂದ ಶ್ರೀರಾಮನಹಳ್ಳಿ ಗೃಹಲಕ್ಷ್ಮಿ ಗೃಹ ನಿರ್ಮಾಣ ಸೊಸೈಟಿಯು ಸುಮಾರು ಮೂರು ಕಿಮೀ ದೂರದಲ್ಲಿ ಇರುತ್ತದೆ. ನಾನು ಮತ್ತು ಚಾಸಾ-1 ಸದರಿ ಸೊಸೈಟಿಯ ಬಳಿ ಬೈಕ್ ನಲ್ಲಿ ವಾಹನದಲ್ಲಿ ಹೋದೆವು. ಚಾಸಾ-1 ಇವರು ನನ್ನನ್ನು ಸೊಸೈಟಿ ಬಳಿ ಕೆಲಸ ಇರುವುದಾಗಿ ಎಂದು ಕರೆದುಕೊಂಡು ಹೋಗಿದ್ದರು. ದಿಃ24.07.2016 ಕ್ಕಿಂತ ಮುಂಚೆ ನಾನು ಶ್ರೀರಾಮನಹಳ್ಳಿ ಗೃಹಲಕ್ಷ್ಮಿ ಗೃಹ ನಿರ್ಮಾಣ ಸೊಸೈಟಿಯ ಜಮೀನುಗಳಲ್ಲಿ ಕೆಲಸ ಮಾಡಿದ್ದೇನೆ. ಚಾಸಾ-1 ರವರು ಆಗ ನನಗೆ ತಿಂಗಳಿಗೆ ಹತ್ತು ಸಾವಿರ ರೂಪಾಯಿ ಸಂಬಳ ಕೊಡುತ್ತಿದ್ದರು. ಪ್ರತಿದಿನ ಚಾಸಾ-1 ರವರು ಬಂದು ನನ್ನನ್ನು ಬೈಕ್ ನಲ್ಲಿ ಕರೆದುಕೊಂಡು ಹೋಗಿ ಕೆಲಸ ಮಾಡಿಸುತ್ತಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರಿದು ಬೇರೆ ಬೇರೆ ಕಡೆ ಕೆಲಸ ಇದ್ದ ಕಡೆ ಸಹ ಕರೆದುಕೊಂಡು ಹೋಗುತ್ತಿದ್ದರು ಎಂದು ಹೇಳುತ್ತಾರೆ.

4. ಶ್ರೀರಾಮನಹಳ್ಳಿ ಗೃಹಲಕ್ಷ್ಮಿ ಗೃಹ ನಿರ್ಮಾಣ ಸೊಸೈಟಿ ಜಮೀನಿನಲ್ಲಿ ಕೆಲಸ ಮಾಡುವಾಗ ಅಲ್ಲಿ ನಿರ್ದಿಷ್ಟ ಕೆಲಸದ ಅವಧಿ ಇರಲಿಲ್ಲ. ಸದರಿ ಸೊಸೈಟಿಯ ಜಮೀನಿನ ಉಸ್ತುವಾರಿಯನ್ನು ಚಾಸಾ-5 ನೋಡಿಕೊಳ್ಳುತ್ತಿದ್ದರು. ಚಾಸಾ-5 ಇವರು ಕೆಲಸ ಇದ್ದರೆ

ಕೆಲಸ ಕೊಡುತ್ತಾರೆ ಇಲ್ಲದಿದ್ದರೆ ಕೆಲಸದಿಂದ ತೆಗೆಯುತ್ತಾರೆ ಎಂದರೆ ಸರಿಯಲ್ಲ. ಸದರಿ ಸೊಸೈಟಿಯಲ್ಲಿ ಕೆಲಸ ಇದ್ದರೂ ಇಲ್ಲದೇ ಇದ್ದರೂ ನನಗೆ ಕೆಲಸವನ್ನು ಕೊಡಿಸುತ್ತಾರೆ ಎಂದು ಹೇಳುತ್ತಾರೆ.

5. ಘಟನೆ ಸಮಯದಲ್ಲಿ ಚಾಸಾ-1, 3 ಮತ್ತು 4 ಸ್ಥಳದಲ್ಲಿ ಕೆಲಸ ಮಾಡುತ್ತಿದ್ದರು. ಸೆಕ್ಯೂರಿಟಿ ಕೆಲಸ ಮಾಡಬೇಕಾದರೆ ನಮಗೆ ಸೊಸೈಟಿಯವರು ಸಮವಸ್ತ್ರ, ಐಡಿ ಹಾಗೂ ಗುರುತಿನ ಚೀಟಿ ಕೊಡುತ್ತಾರೆ ಎಂದರೆ ಸರಿಯಲ್ಲ. ನನ್ನಮುಖ್ಯ ವಿಚಾರಣೆಯ ಸಮಯದಲ್ಲಿ ನನ್ನನ್ನು ಚಾಸಾ-1 ಇವರು ಕರೆದುಕೊಂಡು ಬಂದಿದ್ದರು ಎಂದರೆ ಸರಿಯಲ್ಲ. ನಾನೇ ಬಂದಿದ್ದೆನು. ಚಾಸಾ-1 ಇವರು ಏನು ಸಾಕ್ಷಿ ಹೇಳಬೇಕು ಎಂದು ನನಗೆ ಕಲಿಸಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ.

6. ಅಂದು ನಾವು ಸುಮಾರು ಅರ್ಧ ಘಂಟೆಗಳ ಕಾಲ ಸ್ಥಳದಲ್ಲಿದ್ದೆವು. ಗಲಾಟೆಯಾದ ನಂತರ ಹೊರಟು ಹೋದೆವು. ಘಟನೆಯಾದ ಜಮೀನಿನ ಸರ್ವೆ ನಂಬರ್ ಹೇಳಲು ಬರುವುದಿಲ್ಲ. ಸದರಿ ಸೊಸೈಟಿಯ ಜಮೀನಿನಲ್ಲಿ ಏನು ಕೆಲಸ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಸೊಸೈಟಿಯವರು ಸೈಟುಗಳನ್ನು ಮಾಡುತ್ತಿದ್ದರು. ಘಟನೆ ನಡೆದ ಸ್ಥಳದಿಂದ ಮುಖ್ಯ ರಸ್ತೆಯು ಸುಮಾರು ಒಂದು ಕಿಮೀ ದೂರದಲ್ಲಿದೆ. ಸದರಿ ಮುಖ್ಯ ರಸ್ತೆಯಿಂದ ರಾಜಾನುಕುಂಟೆ ಸರ್ಕಾರಿ ಆಸ್ಪತ್ರೆಯು 2-3 ಕಿಮೀ ದೂರದಲ್ಲಿದೆ. ಸದರಿ ದಿನ ರಾಜಾನುಕುಂಟೆ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಲು ತೊಂದರೆ ಇರಲಿಲ್ಲ ಎಂದರೆ ತೊಂದರೆ ಇತ್ತು, ತುಂಬಾ ಏಟಾಗಿದ್ದರಿಂದ ಯಲಹಂಕ ಆಸ್ಪತ್ರೆಗೆ ಹೋಗಿದ್ದೆವು ಎಂದು ಹೇಳುತ್ತಾರೆ. ನನಗೆ ಕಣ್ಣು ಏಟಾಗಿದ್ದರಿಂದ ನಾನು ಹೆಚ್ಚಿನ ಚಿಕಿತ್ಸೆಗಾಗಿ ಜಯನಗರ ಆಸ್ಪತ್ರೆಗೆ ಹೋದೆನು. ಘಟನೆ ಸ್ಥಳದಿಂದ ಯಲಹಂಕ ಸರ್ಕಾರಿ ಆಸ್ಪತ್ರೆಗೆ 6-7 ಕಿಮೀ ಅಂತರದಲ್ಲಿದೆ. ಯಲಹಂಕ ಆಸ್ಪತ್ರೆಗೆ ಹೋದ ಸಮಯ ನನಗೆ ನೆನಪಿಲ್ಲ, ಏಕೆಂದರೆ ನನಗೆ ಸಾಕಷ್ಟು ಗಾಯಗಳಾಗಿದ್ದವು. ಚಾಸಾ-3 ಮತ್ತು 4 ಇವರು ಕಾರಿನಲ್ಲಿ ನನ್ನನ್ನು ಮತ್ತು ಚಾಸಾ-1 ರವರನ್ನು ಯಲಹಂಕ ಆಸ್ಪತ್ರೆಗೆ ಕರೆದುಕೊಂಡು ಹೋದರು. ಸದರಿ ಕಾರ್ ಯಾರದ್ದು ಎಂದು ನನಗೆ ಗೊತ್ತಿಲ್ಲ. ಯಲಹಂಕ ಆಸ್ಪತ್ರೆಯಲ್ಲಿ

ಅರ್ಧದಿಂದ ಒಂದು ಘಂಟೆಗಳ ಕಾಲ ಇದ್ದೆನು. ಅದೇ ದಿನ ಮಧ್ಯಾಹ್ನ 03.00 ಘಂಟೆಗೆ ನಾವು ಇಬ್ಬರು ರಾಮಕೃಷ್ಣ ಆಸ್ಪತ್ರೆಗೆ ಹೋದೆವು. ನಂತರ ಚಾಸಾ-1 ಇವರನ್ನು ನಿಮಾನ್ಸ್‌ಗೆ ಸೇರಿಸಿದರು ಎಂದರೆ ನನಗೆ ಗೊತ್ತಿಲ್ಲ, ನಾನು ರಾಮಕೃಷ್ಣ ಆಸ್ಪತ್ರೆಯಲ್ಲಿ ಎರಡು ದಿವಸ ಇದ್ದೆನು. ನಾನು ದಿಃ26.07.2016 ರಂದು ರಾಮಕೃಷ್ಣ ಆಸ್ಪತ್ರೆಯಿಂದ ಸಂಜೆ ಡಿಸ್ಚಾರ್ಜ್ ಆದೆನು. ರಾಮಕೃಷ್ಣ ಆಸ್ಪತ್ರೆಯಲ್ಲಿ ಎಷ್ಟು ಸಮಯ, ಯಾವ ಡಾಕ್ಟರ್, ಚಾಸಾ-1 ರವರಿಗೆ ಚಿಕಿತ್ಸೆ ನೀಡಿದರು ನನಗೆ ಗೊತ್ತಿಲ್ಲ.

7. ನನಗೆ ಮದ್ಯಪಾನ ಮಾಡುವ ಚಟ ಇರುತ್ತದೆ ಎಂದರೆ ಸರಿಯಲ್ಲ. ಚಾಸಾ-3 ಮತ್ತು 4 ಇವರು ಶ್ರೀರಾಮನಹಳ್ಳಿ ಗೃಹಲಕ್ಷ್ಮಿ ಗೃಹ ನಿರ್ಮಾಣ ಸೊಸೈಟಿಯಲ್ಲಿ ನಮ್ಮ ಜೊತೆ ಸೆಕ್ಯೂರಿಟಿ ಕೆಲಸ ಮಾಡುತ್ತಿದ್ದರು. ಚಾಸಾ-5 ರವರ ತೋಟದಲ್ಲಿ ನಾನು ಕೂಲಿ ಕೆಲಸ ಮಾಡುತ್ತೇನೆ ಎಂದರೆ ಸಾಕ್ಷಿ ಅಲ್ಲಿಯೂ ಸಹ ಕೆಲಸ ಮಾಡುತ್ತೇನೆ ಎಂದು ಹೇಳುತ್ತಾರೆ. ಚಾಸಾ-5 ಮತ್ತು ಆರೋಪಿತರಿಗೆ ಬಹಳ ವರ್ಷಗಳಿಂದ ವೈಮನಸ್ಸು ಇದೆ ಎಂದರೆ ನನಗೆ ಗೊತ್ತಿಲ್ಲ.

8. ಆಸ್ಪತ್ರೆಯಿಂದ ಬಿಡುಗಡೆ ಆದ ನಂತರ ಪೋಲಿಸ್ ಠಾಣೆಗೆ ಹೋಗಿರುವುದಿಲ್ಲ. ಸಾಕ್ಷಿ ಮುಂದುವರಿದು ಆಸ್ಪತ್ರೆಯಲ್ಲಿಯೇ ಹೇಳಿಕೆ ನೀಡಿರುತ್ತೇನೆ ಎಂದು ಹೇಳುತ್ತಾರೆ. ಮು.ಮಾ-1 ರಿಂದ 3 ರಂತಹ ದೊಣ್ಣೆಗಳು ಎಲ್ಲಾ ಕಡೆ ಸಿಗುತ್ತವೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೋಸ್ಕರ ಮು.ಮಾ-1 ರಿಂದ 3 ಅನ್ನು ಸುಳ್ಳು ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ನಾನು ಶ್ರೀರಾಮನಹಳ್ಳಿ ಗೃಹಲಕ್ಷ್ಮಿ ಗೃಹ ನಿರ್ಮಾಣ ಸೊಸೈಟಿಯ ಜಮೀನಿಗೆ ಆ ದಿನ ಹೋಗಿರುವುದಿಲ್ಲ ಹಾಗೂ ನಾನು ಹೇಳಿದಂತೆ ಯಾವುದೇ ಘಟನೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಆ ದಿನ ಯಾವುದೇ ಘಟನೆ ನಡೆಯದೇ ಇದ್ದರೂ ಸಹ ಆರೋಪಿತರಿಗೆ ತೊಂದರೆ ಕೊಡುವ ಉದ್ದೇಶದಿಂದ ಚಾಸಾ-5 ರವರು ಹೇಳಿಕೊಟ್ಟಂತೆ ಹಾಗೂ ಚಾಸಾ-1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಆದ ಗಾಯಗಳು ನಾನು ಮದ್ಯಪಾನ ಮಾಡಿ ಬಿದ್ದು ಮಾಡಿಕೊಂಡಂತವುವು ಎಂದರೆ ಸರಿಯಲ್ಲ.

ಆರೋಪಿತರು ಘಟನಾ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನನಗಾಗಲೀ ಅಥವಾ ಚಾಸಾ-1 ಇವರಿಗಾಗಲೀ, ಜಾತಿ ನಿಂದನೆ ಮಾಡಿರುವುದಿಲ್ಲ, ಹಲ್ಲೆ ಮಾಡಿರುವುದಿಲ್ಲ, ಜೀವ ಬೆದರಿಕೆ ಹಾಕಿರುವುದಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿಲ್ಲ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ</u>** 4 ನೇ ಆರೋಪಿ ಪರ ಶ್ರೀ ಜೆ ಎಸ್ ಎಸ್ ವಕೀಲರಿಂದಃ 4 ನೇ ಆರೋಪಿ ಪರ ವಕೀಲರು ಮೇಲಿನ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳುವುದಾಗಿ ನುಡಿಯುತ್ತಾರೆ.

**<u>ಮರುವಿಚಾರಣೆಃ ಇಲ್ಲ</u>**

(ಸಾಕ್ಷಿ ಹೇಳಿದಂತೆ ಹೇಳಿಕೆಯನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಕೆ. ಗುರುಪ್ರಸಾದ್)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು